O.S. ನಂಬರಃ 23/2022

ಪಿ. ಡಬ್ಲ್ಯೂಃ 1

ದಿಃ 01-04-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ</u> 1 ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ವಿ.ವಿ.ಎಸ್ ರವರಿಂದಃ

ದಾವಾ ಆಸ್ತಿಗಳು ಈ ಮೋದಲು ರಾಮಕೃಷ್ಣ ನಾಯಕ ಇವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಅವರು ಮೃತ ಆದ ನಂತರ ನನಗೆ ಹಾಗೂ ಪ್ರತಿವಾದಿಯರಿಗೆ ವಾರಸಾ ನಾತೆಯಿಂದ ಬಂದರುತ್ತದೆ. ದಾವಾ ಆಸ್ತಿಗಳಲ್ಲಿ 1 ನೇ ಪ್ರತಿವಾದಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿಯರ ಮಧ್ಯ ಯಾವುದೇ ಸರಸನಿರಸ ವಾಂಟಣೆಯಾಗಿರುವುದಿಲ್ಲ ಎಂದರೆ ಸರಿ. ನಾವು ಬಾಯಿ ಮಾತಿನಿಂದ ಮಾಡಿಕೊಂಡಿರುವುದು ಸಮಂಜಸವಾಗಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಗೂ ಸಹ ಕಡಿಮೆ ಮೌಲ್ಯದ ಆಸ್ತಿಯೇ ಸಿಕ್ಕಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಗೆ ತಮ್ಮ ಹಕ್ಕಿನ ಆಸ್ತಿಯನ್ನು ಕೊಡಲು ನನ್ನದು ಯಾವುದೇ ತಕರಾರು ಇರುವುದಿಲ್ಲ.

<u>ಪಾಟಿ ಸವಾಲುಃ</u> 2 ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಎ.ಎನ್.ಟಿ ರವರಿಂದಃ

2. ನನ್ನ ತಂದೆಯ ಮನೆ ಬಾಸ್ಗೋಡ ಗ್ರಾಮದಲ್ಲಿರುತ್ತದೆ ಎಂದರೆ ಸರಿ. ನನ್ನ ವಿದ್ಯಾಭ್ಯಾಸ ಬಾಸ್ಗೋಡ ಗ್ರಾಮದಲ್ಲಿಯೇ ಆಗಿರುತ್ತದೆ ಎಂದರೆ ಸರಿ. ನನಗೆ ಯಾರೂ ಸಹೋದರರು ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿಯರು ನನ್ನ ಸಹೋದರಿಯರು ಎಂದರೆ ಸರಿ. ನಮ್ಮ 3 ರ ಸಹೋದರಿಯರಲ್ಲಿ ಹಿರಿಯವರು ಯಾರು ಎಂದರೆ 1 ನೇ ಪ್ರತಿವಾದಿ. ನಂತರ 2 ನೇ ಪ್ರತಿವಾದಿ ಆಗಿದ್ದು, ನಂತರ ನಾನು ಕಿರಿಯವಳು ಎಂದರೆ ಸರಿ. ನನ್ನ ಮದುವೆಯಾಗುವ ಪೂರ್ವದಲ್ಲಿ ನಾನು ಬಾಸ್ಗೋಡ ಗ್ರಾಮದಲ್ಲಿ ನನ್ನ ತಂದೆ ತಾಯಿ ಹಾಗೂ ಸಹೋದರಿಯರ ಜೊತೆ ಒಟ್ಟಿಗೆ ವಾಸ ಮಾಡುತ್ತಿದ್ದೆ ಎಂದರೆ ಸರಿ. ಪ್ರತಿವಾದಿಯರೂ ಸಹ ಮದುವೆಯ ಪೂರ್ವದಲ್ಲಿ ನಮ್ಮ ತಂದೆ ತಾಯಿಯ ಜೊತೆಗೆ ವಾಸಮಾಡುತ್ತಿದ್ದು, ಮದುವೆಯಾದ ನಂತರ ತಮ್ಮ ಗಂಡನ ಮನೆಗೆ ಹೋಗಿರುತ್ತಾರೆ ಎಂದರೆ ಸರಿ. ನನ್ನ ತಾಯಿ 1984 ರಲ್ಲಿ ಮರಣಪಟ್ಟಿರುತ್ತಾರೆ. ನನ್ನ ತಂದೆಯವರು ನನ್ನ ತಾಯಿ ಮರಣಪಟ್ಟ 2 ವರ್ಷಗಳ ನಂತರ ತೀರಿಕೊಂಡಿರುತ್ತಾರೆ.

3. ಈ ಹಿಂದೆ ವಾಂಟಣಿ ದಾವೆಯಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ಕೊರೋನಾ ಬರುವ ಮೊದಲು ಸಲ್ಲಿಸಿದ್ದೆ ಎಂದು ನುಡಿಯುತ್ತಾರೆ. ಆ ದಾವೆಯಲ್ಲಿ 2 ನೇ ಪ್ರತಿವಾದಿಯು ತಕರಾರು ಹಾಕಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. 2019 ರಲ್ಲಿ ಕೋವಿಡ್ ಸಮಯದಲ್ಲಿ ಒಂದು ತಿಂಗಳ ಕಾಲ ನ್ಯಾಯಾಲಯಗಳು ಬಂದ್ ಆಗಿದ್ದವು

ಎಂದರೆ ಸರಿ. ಸಾಮಾನ್ಯವಾಗಿ 2020 ರ ನಂತರ ನ್ಯಾಯಾಲಯಗಳಾಗಲಿ ಅಥವಾ ಬೇರೆ ಸರಕಾರಿ ಕಚೇರಿಗಳಾಗಲಿ ಕಾರ್ಯಗಳನ್ನು ನಿರ್ವಹಿಸಲು ಪ್ರಾರಂಭವಾದವು ಎಂದರೆ ಸರಿ. ಜನವರಿ 2021 ರ ನಂತರದಲ್ಲಿ ನ್ಯಾಯಾಲಯಗಳಲ್ಲಿ ವಿಚಾರಣೆ ಪ್ರಾರಂಭವಾದವು ಎಂದರೆ ಸರಿ. ನ್ಯಾಯಾಲಯಗಳು ಪ್ರಾರಂಭವಾದ ನಂತರ ವಕೀಲರು ನ್ಯಾಯಾಲಯಕ್ಕೆ ಬಂದು ಹಾಜರಾಗುತ್ತಿದ್ದರು ಎಂದರೆ ಸರಿ.

4. ಕೊರೋನಾ ಅವಧಿಯ ನಂತರ ವಾಹನಗಳ ಸಂಚಾರ ಮೊದಲಿನಂತೆ ಪ್ರಾರಂಭವಾದವು ಎಂದರೆ ಸರಿ. ನ್ಯಾಯಾಲಯವು ಮುಂದಿನ ವಾಯಿದೆಯನ್ನು ಹೇಳಿದಾಗ ವಕೀಲರ ಜೊತೆ ಚರ್ಚೆ ಮಾಡುತ್ತಿದ್ದೆ ಎಂದರೆ ಸರಿ. ದಿಃ01-12-2021 ರಂದು ನ್ಯಾಯಾಲಯದಲ್ಲಿ ಹಿಂದಿನ ದಾವೆಯ ವಿಚಾರಣೆ ಇತ್ತು ಎಂದರೆ ನೆನಪಿರುವುದಿಲ್ಲ. ಆ ದಿನ ನ್ಯಾಯಾಲಯದಲ್ಲಿ 3 ಸಲ ಪ್ರಕಾರಣವನ್ನು ಕರೆಸಿರುತ್ತಾರೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನನಗೆ ಹುಷಾರು ಇರಲಿಲ್ಲ ಎಂದು ನುಡಿಯುತ್ತಾರೆ. ದಿಃ01-12-2021 ರಂದು ನನಗೆ ಹುಷಾರು ಇರಲಿಲ್ಲ ಎಂದು ತೋರಿಸಲು ಈ ದಾವೆಯಲ್ಲಿ ಯಾವುದೇ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದರೂ ಸಹ ಹಾಗೂ ನಿಮಗೆ ದಾವೆಯನ್ನು ನಡೆಸಲು ಆಸಕ್ತಿ ಇರುವುದಿಲ್ಲ ಎಂದು ಹಿಂದಿನ ದಾವೆಯನ್ನು ನಿಖಾಲೆ ಮಾಡಲಾಯಿತು ಎಂದರೆ ಸರಿ.

5. ದಾವಾ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಹಕ್ಕಿನ ಆಸ್ತಿಗಳು ಎಂದರೆ ಸರಿ. ಸ್ವಯಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಬಾಸ್ಗೋಡ ಗ್ರಾಮದಲ್ಲಿ ಇರುವ ಮನೆಯು ಮೂಲತಃ ನಿಮ್ಮ ತಂದೆಗೆ ಸೇರಿದ ಮನೆ ಎಂದರೆ ಸಾಕ್ಷಿಯು ನಮ್ಮ ಅಜ್ಜ ನಮ್ಮ ತಾಯಿಗೆ ಕೊಟ್ಟ ಆಸ್ತಿ ಎಂದು ನುಡಿಯುತ್ತಾರೆ. ಅದು 6 ಗುಂಟೆ 8 ಆಣೆ ಕ್ಷೇತ್ರ ಇರುತ್ತದೆ. ಅದರಲ್ಲಿ ಆರ್ ಸಿ ಸಿ ಮನೆ ಇರುತ್ತದೆ ಎಂದರೆ ಸಾಕ್ಷಿಯು ಹೆಂಚಿನ ಮನೆ ಎಂದು ನುಡಿಯುತ್ತಾರೆ. 6 ಗುಂಟೆ 8 ಆಣೆ ಕ್ಷೇತ್ರದಲ್ಲಿಯೇ ಮನೆ ಇರುತ್ತದೆ ಎಂದರೆ ಸರಿ. ಸದರಿ ಜಮೀನು ಅಂಕೋಲಾ-ಗಂಗಾವಳಿ ರಸ್ತೆಯ ಲಗ್ತ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಮೀನು ಹಳ್ಳಿಯಲ್ಲಿ ಇದ್ದು, ರಸ್ತೆಯ ಲಗ್ತ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ 4 ಕೋಣೆಗಳು ಇರುತ್ತವೆ. ಅದರಲ್ಲಿ ಒಂದು ಅಡುಗೆ ಕೋಣೆ ಹಾಗೂ ಮತ್ತೊಂದು ವರಾಂಡ ಇರತ್ತದೆ ಎಂದರೆ ಸರಿ. ಹಾಗೂ ಶೌಚಾಲಯ ಮತ್ತು ಹಿತ್ತಲಿನಲ್ಲಿ ಬಾಗಾಯ್ತು ಜಮೀನು ಇರುತ್ತದೆ ಎಂದರೆ ಸರಿ. ಸದರಿ ಮನೆಯು ರವಿ ನಾಯಕ ಎಂಬ ವಕೀಲರ ಮನೆಯ ಹತ್ತಿರ ಇರುತ್ತದೆ ಎಂದರೆ ಸರಿ. ನಿಮ್ಮ ಮನೆಯಿಂದ ಅಂಕೋಲಾ-ಬೆಳಂಬಾರ ರಸ್ತೆಯು ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿಯು ನನಗೆ ದೂರ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಾಯಿಯು ಸದರಿ ಮನೆಯನ್ನು ನೋಂದಣಿ ಕಾಗದ ಪತ್ರದ ಮೂಲಕ ಹಸ್ತಾಂತರ ಮಾಡಿದ್ದು ಇರುತ್ತದೆಯಾ ಎಂದರೆ ಸಾಕ್ಷಿಯು ನಮ್ಮ ತಾಯಿಯು ನನಗೆ ಯಾವುದೇ ಗಂಡು ಮಕ್ಕಳು ಇರದ ಕಾರಣ ನೀನೇ ದೀಪಾ ಹಚ್ಚು ಎಂದು ನನಗೆ

ಕೊಟ್ಟಿರುತ್ತಾಳೆ ಎಂದು ನುಡಿಯುತ್ತಾರೆ. ಇದರ ಬಗ್ಗೆ ಯಾವುದೇ ನೋಂದಯಿತ ಕಾಗದ ಪತ್ರ ಮಾಡಿಕೊಟ್ಟಿದ್ದು ಇರುವುದಿಲ್ಲ ಎಂದರೆ ಸಾಕ್ಷಿಯು ಇದ್ದರೂ ಇರಬಹುದು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾಖಲೆಗಳು ಇದ್ದ ಸಂದರ್ಭದಲ್ಲಿ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. 6 ಗುಂಟೆ 8 ಆಣೆ ಕ್ಷೇತ್ರದ ಆಸ್ತಿಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಆಸ್ತಿಯು ಸ್ವಯಾರ್ಜಿತ ಆಸ್ತಿನಾ ಅಥವಾ ಪಿತ್ರಾರ್ಜಿತ ಆಸ್ತಿನಾ ಎಂದರೆ ಸಾಕ್ಷಿಯು ಖರೀದಿ ಮಾಡಿದ ಆಸ್ತಿ ಎಂದು ನುಡಿಯುತ್ತಾರೆ. ಮನೆಯ ಸಂಖ್ಯೆ 22 ಆಗಿರುತ್ತದೆ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.